Indian Journal of History and Archaeology

ISSN (E):2582-225X
VOL-2, ISSUE -4,NOVEMBER-DECEMBER, 2020, 27-30

# ಚಿತ್ರದುರ್ಗ ಪಾಳೆಯಗಾರರ ಕಾಲದ ಶೈವ ಧರ್ಮ

**ಮಾರುತಿ ಹೆಚ್.**

**ಮಾರುತಿ ಹೆಚ್.**
ಪಿಎಚ್.ಡಿ. ಸಂಶೋಧನಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡವಿಶ್ವವಿದ್ಯಾಲಯ, ಹಂಪಿ

ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಅತಿ ಪುರಾತನವಾದ ಧರ್ಮಶಾಖೆಗಳಲ್ಲಿ ಶೈವ ಧರ್ಮವು ಒಂದು. ಇದು ವೇದಗಳಿಗಿಂತಲೂ ಪ್ರಾಚೀನವಾದುದು. ಶಿವನ ಉಪಾಸನೆಯ ಬೇರುಗಳು ಸಿಂಧು ಸಂಸ್ಕೃತಿಯಲ್ಲಿಯೇ ಕಂಡುಬರುತ್ತದೆ. ಸಿಂಧು ಸಂಸ್ಕೃತಿಯಲ್ಲಿ ದೊರೆತ ಚಿತ್ರವು ಪಶುಜೀವರುಗಳಿಗೆ ಒಡೆಯನಾದ ಪಶುಪತಿ ಆತನೆಂಬ ಸಾಂಕೇತಿಕ ಕಲ್ಪನೆಯು ಆಗಲೇ ತಲೆದೋರಿರಬಹುದೆಂಬುದಕ್ಕೆ ಸಾಕ್ಷಿ. ಎತ್ತರವಾದ ಪೀಠದ ಮೇಲೆ ಯೋಗಮುದ್ರೆಯಲ್ಲಿ ಕುಳಿತಿರುವ ಶಿವನು ತ್ರಿಶೂಲದ ಆಕಾರವನ್ನುಳ್ಳ ತಲೆಯುಡುಗೆಯನ್ನು ಧರಿಸಿದ್ದಾನೆ. ಸುತ್ತಲೂ ಕೆಲವು ಪ್ರಾಣಿಗಳಿವೆ. ಮುಂದಿನ ಶೈವ ಧರ್ಮದಲ್ಲಿ ಈ ಪಶುಪತಿ ಕಲ್ಪನೆ ಪ್ರಧಾನವಾಗಿ ಬೆಳೆದುಬಂದಿತು. 'ರುದ್ರ' ಎಂಬ ಹೆಸರಿನಿಂದ ಗೋಚರಿಸುವ ಉಗ್ರದೇವತೆ ವೇದದಲ್ಲಿ ಕ್ರಮೇಣ ಪಶುಪತಿ ಎಂಬ ಹೆಸರನ್ನು ಪಡೆಯುತ್ತಾನೆ. ಅಂದು ಭಯಂಕರನಾಗಿದ್ದವನು ಶಂಭುವಾಗುತ್ತಾನೆ, ಶಿವನಾಗುತ್ತಾನೆ, ಶಂಕರನಾಗಿ, ಗಿರೀಶ, ಮೃಡ, ಶರ್ವ, ಕಪರ್ದಿ ಎಂಬ ಮುಂತಾದ ನಾಮಾಂಕಿತ ಪಡೆಯುತ್ತಾನೆ. ಶಿವ ಮತ್ತು ರುದ್ರನಲ್ಲಿ ಅಭೇದವುಂಟಾಗಿ ಅವರಿಬ್ಬರೂ ಏಕದೇವತೆಯಾಗಿ ಪರಿಣಮಿಸಿದ ಬೆಳವಣಿಗೆ ಕುತೂಹಲವನ್ನು ಮೂಡಿಸುತ್ತದೆ.[1] ಶಿವನು ವೇದಪೂರ್ವಕಾಲದ ವೈದಿಕ ದೇವತೆಯಾಗಿ ಹಿಂದೂ ಧರ್ಮದ ಬೆಳವಣಿಗೆಯಲ್ಲಿ ವಹಿಸಿರುವ ಪಾತ್ರ ಗಮನಾರ್ಹ.

ಶಿವನ ಕಲ್ಪನೆ ಉಪನಿಷತ್ತುಗಳಿಗೆ ಬರುವ ವೇಳೆಗೆ ಅತ್ಯುನ್ನತ ಪರಬ್ರಹ್ಮ ಸ್ವರೂಪಕ್ಕೇರಿತು. ಶಿವನ ಪೂರ್ಣಸ್ವರೂಪ ಶ್ವೇತಾಶ್ವತರ ಉಪನಿಷತ್‌ನಲ್ಲಿ ರೂಪಗೊಂಡಿರುವುದು ಕಂಡುಬರುತ್ತದೆ. ಶಿವನಲ್ಲಿ ದೈವತ್ವದ ಕಲ್ಪನೆಯನ್ನು ದೇವತೆಗಳನ್ನು ಸೃಷ್ಟಿಸುವವನು, ಕಾಪಾಡುವವನು, ಸರ್ವವ್ಯಾಪಿಯಾದವನು, ಎಲ್ಲ ಪ್ರಾಣಿ ಹೃದಯದಲ್ಲಿರುವವನು, ಸ್ಥಾವರ ಜಂಗಮಲೋಕವೆಲ್ಲಾ ಆತನ ಕೈವಶದಲ್ಲಿರುವುದು ಎಂಬ ಇತ್ಯಾದಿ ಅಂಶಗಳನ್ನು ಈ ಉಪನಿಷತ್ತು ಕಂಡಿದೆ. ಆತ

"ಅಣೋರಣೀಯನ್ ಮಹತೋಮಹಿಯೂನ್," "ಮಾಯೆಯೇ ಪ್ರಕೃತಿ, ಆ ಮಾಯೆಯನ್ನು ಬಳಸಿ ಸೃಷ್ಠಿಗೆ ಕಾರಣನಾದವನು ಶಿವ"[2] ಎಂಬ ಮಾತುಗಳಲ್ಲಿ ಶಿವ ಯಾವ ವರ್ಗಕ್ಕೂ ಶಾಖೆಗೂ ಸೇರಿದವನಾಗದೇ ಪರಬ್ರಹ್ಮ ಸ್ವರೂಪಕ್ಕೆ ಪ್ರತಿರೂಪವಾಗಿದ್ದಾನೆ. ಹಿಂದೂ ಧರ್ಮದಲ್ಲಿ "ಶಿವ" ಎಂಬ ಶಕ್ತಿಪೂರ್ಣ ಸಂಕೇತವಾಗಿ ಪರಿಣಮಿಸುವುದರಲ್ಲಿ ಮುಖ್ಯವಾದುದೆಂದು ಹೇಳಬಹುದು.

ಕಾಲ ಕಳೆದಂತೆ ಶಿವನ ಉಪಾಸನೆಯು ಬಹುರೂಪಗಳನ್ನು ಧರಿಸಿ ಬಹುಮುಖವಾಗಿ ಬೆಳೆಯತೊಡಗಿತು. ಆಗಮಾದಿಗಳ ಕಾಲದಲ್ಲಿ ಬಗೆಬಗೆಯಾಗಿ ಇತಿಹಾಸ ಪುರಾಣ ಬೆಳೆಯಿತು. ಶಿವ ಆರ್ಯರ ಪ್ರಮುಖ ಉಪಸ್ಯದೇವತೆಯಾಗಿದ್ದನೆಂಬುದಕ್ಕೆ ರಾಮಾಯಣ ಮಹಾಭಾರತ ಸಮಯಕ್ಕಾಗಲೆ ವಿಪುಲ ಆಧಾರಗಳವೆ. ರಾಮನೇ ಸ್ವತಃ ರಾಮೇಶ್ವರದಲ್ಲಿ ಶಿವಲಿಂಗವನ್ನು ಪೂಜಿಸಿದುದನ್ನೂ ಮಹಾಭಾರತ ದ್ರೋಣ ಪರ್ವದಲ್ಲಿ ಕೃಷ್ಣ ಅರ್ಜುನರು ಶಿವನನ್ನು ಸ್ತುತಿಸಿದ ಸನ್ನಿವೇಶಗಳನ್ನೂ ಮಾದರಿಯಾಗಿ ನೆನಪಿಸಿಕೊಳ್ಳಬಹುದು. ಶಿವನ ಪ್ರಭಾವವನ್ನು ಚಾರಿತ್ರಿಕವಾಗಿ ಸಮರ್ಥಿಸಿಕೊಳ್ಳಬಹುದಾದರೆ ಕ್ರಿ.ಪೂ. 2ನೇ ಶತಮಾನದ ಮೆಗಾಸ್ತನೀಸ್‌ನು ಶಿವನ ಉಪಾಸಕರಾದ ಶಿವಭಾಗವತರನ್ನು ಹೆಸರಿಸುವುದನ್ನು ಉಲ್ಲೇಖಿಸಬಹುದು.

ಶಿವ ಮತ್ತು ವಿಷ್ಣು ಇವರ ಉಪಾಸನೆ ಬಹುಮುಖ್ಯವಾಗಿ ಇತರೆ ದೇವತೆಗಳ ಪ್ರಭಾವದಿಂದಾಗಿ ಬೆಳೆದುಬಂದಿರುವುದಕ್ಕೆ ಅಂದಿನಿಂದಲೂ ಸಾಕಷ್ಟು ಸಾಕ್ಷಿಗಳು ಕಾಣಸಿಗುತ್ತವೆ. ಭಾಗವತ ಪುರಾಣದಲ್ಲಿ ಕಾಣಬರುವಂತೆ ಒಂದು ಕಡೆ ವೈಷ್ಣವ ಧರ್ಮ ಬೇರು ಬಿಡುತ್ತಿದ್ದರೆ, ಇನ್ನೊಂದು ಕಡೆಯಲ್ಲಿ ಶಿವ-ರುದ್ರ ಇವರ ಸಾಂಕೇತಿಕ ರೂಪವಾದ ಲಿಂಗ ಇವುಗಳ ಆರಾಧನೆಯಿಂದ ಶೈವಧರ್ಮ ಬಹು ಶಾಖೆಗಳಾಗಿ ಹಾಗೂ ವಿಸ್ತಾರವಾಗಿ ಬೆಳವಣಿಗೆ ಹೊಂದಿರುವುದನ್ನು ಕಾಣಬಹುದು. ಹಾಗಾಗಿ ಪ್ರಸ್ತುತ ಲೇಖನದಲ್ಲಿ ಚಿತ್ರದುರ್ಗ ಪಾಳೆಯಗಾರರ ಕಾಲಾವಧಿಗೆ ಸೀಮಿತವಾದಂತಹ ಶೈವಧರ್ಮ ಕುರಿತು ಚರ್ಚಿಸುವುದು ಈ ಲೇಖನದ ಮುಖ್ಯ ಆಶಯವಾಗಿದೆ.

ಶೈವ ಧರ್ಮವು ಪಾಳೆಯಗಾರರ ಕಾಲಾವಧಿಯಲ್ಲಿ ಬಹು ಜನಪ್ರಿಯ ಮತವಾಗಿದ್ದು, ಆಡಾಳತಾಧಿಕಾರಿಗಳು ಈ ಧರ್ಮಕ್ಕೆ ಆಶ್ರಯ ನೀಡಿದರು. ಇವರ ಕಾಲದಲ್ಲಿ ಶೈವಾಗಮಗಳ ರೀತಿಯಲ್ಲಿ ಅರಮನೆಯಲ್ಲಿ ಪೂಜಾ ಪುನಸ್ಕಾರಗಳು ನಡೆಯುತ್ತಿದ್ದವು. ಶೈವ ಪಂಥಕ್ಕೆ ಸಂಬಂಧಿಸಿದಂತಹ ದೇವರುಗಳಿಗೆ ದಾನದತ್ತಿಗಳನ್ನು ನೀಡಿದರು. ಈ ಮತದ ಪ್ರಕಾರ ಶಿವನು ಪ್ರಮುಖ ದೇವರಾಗಿದ್ದು ವೇದ ಮಂತ್ರಗಳನ್ನು ಪಠಿಸುತ್ತಾ ಪೂಜಿಸುತ್ತಾರೆ. ಇವರ ಅವಧಿಯಲ್ಲಿ "ಅದ್ವೈತ ಶೈವ" ಪಂಥವನ್ನು ಶಂಕರಾಚಾರ್ಯರರು ಪ್ರತಿಪಾದಿಸಿ ಪ್ರಸಿದ್ಧಿಪಡಿಸಿದರು. ಆದಿ ಶಂಕರರು ಪುನಿಷತ್ತುಗಳನ್ನು ಆಧರಿಸಿ ಆಧ್ಯಾತ್ಮಿಕ ಪರಿಪೂರ್ಣ "ಆತ್ಮಪರಮಾತ್ಮ" ಒಂದೇ ಎಂಬ ತತ್ವವನ್ನು ಪ್ರತಿಪಾದಿಸಿ ಉಪನಿಷತ್ತುಗಳಲ್ಲಿ ಹೇಳಿದ ನಿರ್ಗುಣ ಬ್ರಹ್ಮನನ್ನು ಒತ್ತಿ ಹೇಳಿದರು. ಈಶ್ವರ ಜೀವ (ಆತ್ಮ) ಜಗತ್ತುಗಳು ಮಾಯೆಯಿಂದ ಕೂಡಿವೆ. ಇದು ಸತ್ಯ ಅಥವಾ ಅಸತ್ಯ

ಅಥವಾ ಎರಡು ಅಥವಾ ಒಂದು, ಬ್ರಹ್ಮ ಆತ್ಮ ಒಂದೇ, ಬ್ರಹ್ಮನು ಒಂದು ಶಾಶ್ವತ ಪವಿತ್ರ ಪರಿಶುದ್ಧ ಪ್ರಜ್ಞೆ ಅಜ್ಞಾನ ಬಂಧಿಯನ್ನಾಗಿಸುತ್ತದೆ ಮತ್ತು ಜ್ಞಾನವು ವಿವೇಚನೆಯನ್ನು ಮಾಡುತ್ತದೆ ಎಂದು ಪ್ರತಿಪಾದಿಸಿದರು ಹಾಗೂ ಶಿವನೊಂದಿಗೆ ಸೂರ್ಯ, ಶಕ್ತಿ, ಗಣೇಶ ಮತ್ತು ವಿಷ್ಣು ಮುಂತಾದ ಪಂಚ ದೇವತೆಗಳನ್ನು ಪೂಜಿಸಬೇಕೆಂದು ಒತ್ತಿ ಹೇಳಿದ್ದಾರೆ. ಈ ಧರ್ಮವನ್ನು ವಿಜಯನಗರದ ಸಂಗಮ ಅರಸರ ಅವಧಿಯಲ್ಲಿದ್ದ ವಿದ್ಯಾತೀರ್ಥರು ಪ್ರಸಿದ್ಧಿ ಪಡಿಸಿದರು. ನಂತರ ವಿದ್ಯಾರಣ್ಯರು ಮತ್ತಷ್ಟು ಪ್ರಚಲಿತಗೊಳಿಸಿ ಶೃಂಗೇರಿಯಲ್ಲಿ ಮಠವನ್ನು ಸ್ಥಾಪಿಸಿ ವಿಜಯನಗರ ಕಾಲಾವಧಿಯಲ್ಲಿ ಒಂದು ಪ್ರಮುಖ ಧರ್ಮವಾಗುವಂತೆ ಮಾಡಿದರು.[3]

ಚಿತ್ರದುರ್ಗ ಪಾಳೆಯಗಾರರ ಮೂಲಪುರುಷನಾದ ತಿಮ್ಮಣ್ಣನಾಯಕನಿಗೂ ಅವನ ಪುತ್ರ ಗಡ್ಡದ ಮದಕರಿನಾಯಕನಿಗೂ ರಸಾಸಿದ್ದರು ದರ್ಶನ ಕೊಟ್ಟರೆಂಬುದು ಹಾಗೂ ಜಡೇಕಲ್ಲು ದುರ್ಗದ ಕಡೆಯಿಂದ ತನ್ನ ಗುಂಪಿನೊಂದಿಗೆ ಚಿತ್ರಕಲ್ಲಿನ ಬೆಟ್ಟ ಪರಿಸರಕ್ಕೆ ಬಂದು ನೆಲೆಸಿದಾಗ ಬಾಳೆಕಾಯಿ ಸಿದ್ದೇಶ್ವರ ಗವಿಯಲ್ಲಿ ಅವನಿಗೆ ಏಳು ಮಂದಿ ರಸಾಸಿದ್ದರ ದರ್ಶನವಾಯಿತು. ಅವನು ಅವರಿಗೆ ಭಕ್ತಿಪೂರ್ವಕವಾಗಿ ನಿತ್ಯ ಹಾಲನ್ನು ತಂದುಕೊಡುತ್ತಿದ್ದನು. ಅವರು ಅವನ ಮೇಲೆ ದಯೆ ತೋರಿ ದಟ್ಟಿ, ದಶೇಕಟ್ಟಿನ ದೂಳತೆ, ಸಿದ್ಧ ಮಾಲಿಕೆ, ಕೈಯಂಟು, ಒಂದು ಕತ್ತಿ ವಿಭೂತಿ ಸಹಿತ ಕೊಟ್ಟರು[4] ಎಂಬ ಐತಿಹ್ಯ ಚಿತ್ರದುರ್ಗ ಬಾಖೈರಿಯಲ್ಲಿ ಹೇಳಿದೆ. ರಸಾಸಿದ್ದರು ಶೈವ ಯತಿಗಳೆಂಬುದು ಮತ್ತು ಪಾಳೆಯಗಾರರು ಅವರ ಅನುಯಾಯಿಗಳಾಗಿದ್ದರು ಎಂಬುದನ್ನು ಇದು ತೋರಿಸುತ್ತದೆ. ಹಿರೇ ಮದಕರಿನಾಯಕನು ಶೈವ ದೈವಭಕ್ತನಾಗಿದ್ದು ಚಂದ್ರಮೌಳೀಶ್ವರನ ಸ್ಫಟಿಕ ಲಿಂಗವನ್ನು ಮಾಡಿಸಿದನು. ಹಾಗೂ ಶಿವರಾತ್ರಿಗೆ ಉಪವಾಸ ಸಮಾರಾಧನೆ ಮಾಡುತ್ತಿದ್ದನು.[5] ಇದೊಂದು ಶೈವ ಆಚರಣೆ ಇದರ ದುರ್ಗಾಧಿ ಏಕನಾತೇಶ್ವರಿ ಕೂಡ ಶೈವ ದೇವತೆ, ಸಂಪಿಗೆ ಸಿದ್ದೇಶ್ವರನ ಪರಮ ಭಕ್ತರಾಗಿದ್ದ ಚಿತ್ರದುರ್ಗದ ಪಾಳೆಯಗಾರರು ಇಮ್ಮಡಿ ಮದಕರಿನಾಯಕನವರೆಗೂ ಎಲ್ಲರೂ ಸಂಪಿಗೆ ಸಿದ್ದೇಶ್ವರ ದೇವಸ್ಥಾನದಲ್ಲಿ ಪಟ್ಟಾಭಿಷೇಕ ಆಚರಿಸಿಕೊಂಡಿದ್ದರು ಎಂದು ಎಂ.ಎಸ್. ಪುಟ್ಟಣ್ಣ ಹೇಳಿದ್ದಾರೆ.[6] ಕಾಶಿಧರ್ಮ ಅಂದರೆ ಶೈವ ಧರ್ಮಕ್ಕೆ ರಾಜಾಶ್ರಯ ನೀಡಿದ್ದ ಕಸ್ತೂರಿ ರಂಗಪ್ಪನಾಯಕ ಹಾಗೂ ಭರಮಣ್ಣನಾಯಕರು[7] ಅದರ ಬೆಳವಣಿಗೆಗೆಂದು ದಾನ–ದತ್ತಿಗಳನ್ನು ನೀಡಿದ್ದರು. ಇವರು ಶೈವ ಸಂಪ್ರದಾಯದ ಶೃಂಗೇರಿ ಮಠದ ಸ್ವಾಮಿಗಳನ್ನು ತಮ್ಮ ರಾಜಗುರುಗಳನ್ನಾಗಿ ಸ್ವೀಕರಿಸಿದ್ದರು ಹಾಗೂ ಅವರು ಧರ್ಮ ಪ್ರಚಾರ ಮಾಡಲು ಅನೇಕ ದಾನ–ದತ್ತಿಗಳನ್ನು ನೀಡಿದ್ದರೆಂಬುದು ತಿಳಿದುಬಂದಿದ್ದು ಒಟ್ಟಾರೆಯಾಗಿ ಈ ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಚಿತ್ರದುರ್ಗ ಪಾಳೆಯಗಾರರು ಶೈವ ಧರ್ಮಕ್ಕೆ ಆಶ್ರಯ ನೀಡಿದ್ದರೆಂಬುದು ಸ್ಪಷ್ಟವಾಗುತ್ತದೆ.

**ಕೊನೆ ಟಿಪ್ಪಣಿ**

1. ತಿಪ್ಪೇರುದ್ರಸ್ವಾಮಿ ಎಚ್., 2015, ವಚನಗಳಲ್ಲಿ ಶೈವ ಧರ್ಮ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ಪು. 56
2. ಶ್ವೇತಾಶ್ವತರ ಉಪನಿಷತ್ III ಪು. 10
3. ಖಂಡೋರಿ ಸರೋಜಿನಿ ದೇವಿ, 1990, ರಿಲಿಜಿಯಸ್ ಇನ್ ವಿಜಯನಗರ, ಪು. 58–59
4. ಹುಲ್ಲೂರು ಶ್ರೀನಿವಾಸ ಜೋಯಿಸರು (ಸಂ), 1968, ಚಿತ್ರದುರ್ಗ ಬಾಖೈರು, ಪು. 21
5. ಪುಟ್ಟಣ್ಣ ಎಮ್.ಎಸ್., 1997, ಚಿತ್ರದುರ್ಗ ಪಾಳೆಯಗಾರರು, ಪು. 72
6. ಅದೇ, ಪು. 34–76
7. ರೈಸ್ ಬಿ.ಎಲ್. (ಸಂ), 1903, ಏ.ಕ. 11, ಶಾ.ಸಂ. ಹಿರಿಯೂರು 60, ಕ್ರಿ.ಶ. 1690, ದಾವಣಗೆರೆ 131, ಕ್ರಿ.ಶ. 1708